# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಬಿಜಿಎಂ/1341/2021**
**ಪಿಓ.ಎ.ಆರ್.ಇ–5 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್, ಅಂಬೇಡ್ಕರ ವೀಧಿ,
ಬೆಂಗಳೂರು, ದಿನಾಂಕ: 24/11/2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಶ್ರೀ. ಸುರೇಶ್ ಬಿನ್ ಭೀಮಪ್ಪ ಗೊಲ್ಲರ್, ದ್ವಿತೀಯ ದರ್ಜೆ ಸಹಾಯಕ, ವಲಯ ನಂ.1, ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ ಧಾರವಾಡ, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ಧಾರವಾಡ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ, **ಶ್ರೀ. ಸುರೇಶ್ ಬಿನ್ ಭೀಮಪ್ಪ ಗೊಲ್ಲರ್, ದ್ವಿತೀಯ ದರ್ಜೆ ಸಹಾಯಕ, ವಲಯ ನಂ.1, ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ ಧಾರವಾಡ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ನಿಮ್ಮ ಮೇಲೆ **ಶ್ರೀ. ವೀರಭದ್ರಪ್ಪ ಕಲ್ಲಪ್ಪ ಹಡಪದ್ @ ನವಲಗೇರಿ, ಗೌಡರ ಓಣಿ, ಕೆಲಗೇರಿ, ಧಾರವಾಡ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ದೂರು ಸಲ್ಲಿಸಿದ್ದು, ದೂರಿನಲ್ಲಿ ಕೆಲಗೇರಿ ಗ್ರಾಮದ ಮುನ್ಸಿಪಾಲಿಟಿ ನಂ.139/22 ಪಿ.ಐ.ಡಿ. ನಂ.1/775ನೇದರಲ್ಲಿ 3 ಗುಂಟೆ ಜಾಗವನ್ನು ದೂರುದಾರರ ಹೆಸರಿಗೆ ಉತ್ತಾರ ಮಾಡಿಕೊಡುವ ಸಲುವಾಗಿ ಎದುರುದಾರರು 15,000/– ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ಧಾರವಾಡ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 07/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 15,000/– ರೂ. ಲಂಚ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i. ದೂರುದಾರರಾದ ಶ್ರೀ. ವೀರಭದ್ರಪ್ಪ ಕಲ್ಲಪ್ಪ ಹಡಪದ್ @ ನವಲಗೇರಿ, ಗೌಡರ ಓಣಿ, ಕೆಲಗೇರಿ, ಧಾರವಾಡ ಇವರು ತಮಗೆ ಸೇರಿದ ಕೆಲಗೇರಿ ಗ್ರಾಮದ ಮುನ್ಸಿಪಾಲಿಟಿ ನಂ.139/22 ಪಿ.ಐ.ಡಿ. ನಂ.1/775ನೆದರಲ್ಲಿ 8 ಗುಂಟೆ ಜಾಗದಲ್ಲಿ ಈಗಾಗಲೇ 5 ಗುಂಟೆ ಜಾಗವನ್ನು ಉತಾರ ಮಾಡಿಸಿಕೊಂಡಿದ್ದು, ಉಳಿದ 3 ಗುಂಟೆ ಜಾಗವನ್ನು ಉತಾರ ಮಾಡಿಕೊಡುವ ಸಲುವಾಗಿ ದಿ:02/08/2017ರಂದು ಅರ್ಜಿ ಸಲ್ಲಿಸಿ ಎದುರುದಾರರನ್ನು ಭೇಟಿ ಮಾಡಲು ಎದುರುದಾರರು 15,000/- ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟಿದ್ದು, ಅದನ್ನು ದೂರುದಾರರು ತಮ್ಮ ಅಳಿಯನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:17/08/2017ರಂದು ಧಾರವಾಡ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ. 07/2017 ರಲ್ಲಿ ಕಲಂ 7, 13(1)(ಡಿ) ರೆ/ವಿ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶಂಕರ್ ಜಾಧವ್ (ನೆರಳುಸಾಕ್ಷಿ), 2) ರಾಮನಗೌಡ ಇವರುಗಳನ್ನು ಬರಮಾಡಿಕೊಂಡು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮುಖಾಂತರ ಸಿ.ಡಿ.ಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ ಮತ್ತು ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 15,000/- (2000X7, 500X2) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚ ರಾಮನಗೌಡ ಬಿಳಿ ಹಾಳೆಯಲ್ಲಿ ಬರಿದುಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ರಾಮನಗೌಡರವರ ಮೂಲಕ ದೂರುದಾರರ ಶರ್ಟಿನ

ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ರಾಮನಗೌಡ ಇವರ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರ್‌ನ ಗುಣದರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಶಂಕರ್ ಜಾಧವ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಟವಲ್‌ನಿಂದ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 17-08-2017 ರಂದು ಮಧ್ಯಾಹ್ನ 12 ಗಂಟೆಯಿಂದ 1.20 ಘಂಟೆಯವರೆಗೆ ಧಾರವಾಡ ಎಸಿಬಿ ಠಾಣೆಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii. ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರಿಗೆ ಫೋನ್ ಮಾಡಿದ್ದು, ಎದುರುದಾರರು ಕೆಲಗೇರಿ ರಸ್ತೆ ಸಾಯಿಬಾಬಾ ಗುಡಿ ಹತ್ತಿರ ಬರಲು ಹೇಳಿದ್ದು, ದಾಳಿ ತಂಡದವರು, ದೂರುದಾರರು ಹಾಗೂ ಪಂಚರು ಸಾಯಿಬಾಬಾ ದೇವಸ್ಥಾನದ ಹತ್ತಿರ ಹೋಗಿ ದೂರುದಾರರು ಹಾಗೂ ನೆರಳುಸಾಕ್ಷಿ ಶಂಕರ್ ಜಾಧವ್ ಇವರನ್ನು ದೇವಸ್ಥಾನದ ಪ್ರಾಂಗಣದ ಕಡೆಗೆ ಕಳುಹಿಸಿ ದಾಳಿ ತಂಡದವರು ಅಲ್ಲಲ್ಲಿ ಮರೆಯಾಗಿ ನಿಂತಿರುತ್ತಾರೆ. ಸುಮಾರು 1.55 ಘಂಟೆಗೆ ಎದುರುದಾರರು ಮೋಟಾರ್‌ಸೈಕಲ್ ಮೇಲೆ ಬಂದಿದ್ದು, ಮೋಟಾರ್‌ಸೈಕಲ್ ಮೇಲೆ ಕುಳಿತುಕೊಂಡಂತೆ ಹಣವನ್ನು ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಹಣ ನೀಡಿದ ನಂತರ ದೂರುದಾರರು ಸಂಜ್ಞೆ ಮಾಡಿದ್ದು, ತಕ್ಷಣ ತನಿಖಾಧಿಕಾರಿಗಳು ಎದುರುದಾರರ ಹತ್ತಿರ ಬಂದು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. ಎದುರುದಾರರ ಎರಡು ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ ಎದುರುದಾರರು ತಮ್ಮ ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಅದನ್ನು ತನಿಖಾಧಿಕಾರಿಯವರ ಸೂಚನೆ

ಮೇರೆಗೆ ಎದುರುದಾರರು ಶರ್ಟ್‌ನಿಂದ ತೆಗೆದು ಹಾಜರುಪಡಿಸಿರುತ್ತಾರೆ. ಪಂಚರು ನೋಟುಗಳ ನಂಬರುಗಳನ್ನು ತಾವು ಈ ಮೊದಲು ದಾಖಲಿಸಿಕೊಂಡ ನಂಬರುಗಳೊಂದಿಗೆ ತಾಳೆ ಮಾಡಿ ಖಾತರಿ ಪಡಿಸಿಕೊಂಡಿರುತ್ತಾರೆ. ಸದರಿ ಜಾಗವು ಸಾರ್ವಜನಿಕ ಸ್ಥಳವಾಗಿದ್ದರಿಂದ ಮಹಜರ್ ಕ್ರಮ ಜರುಗಿಸಲು ಅನಾನುಕೂಲವಾದ ಮೇರೆಗೆ ಅಲ್ಲಿಂದ ಮಧ್ಯಾಹ್ನ 2.25 ಘಂಟೆ ಸುಮಾರಿಗೆ ಹಚ್.ಡಿ.ಎಂ.ಸಿ. ವಲಯ ಕಛೇರಿಗೆ ಬಂದಿರುತ್ತಾರೆ. ಹಣವನ್ನು ತನಿಖಾಧಿಕಾರಿಗಳು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಶರ್ಟಿನ ಜೇಬನ್ನು ತೊಳೆಯಲಾಗಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಶರ್ಟನ್ನು ಕೂಡ ಅಮಾನತ್ತು ಪಡಿಸಿಕೊಂಡಿತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಮತ್ತು ಕಡತದ ಬಗ್ಗೆ ವಿಚಾರಿಸಲಾಗಿ ಎದುರುದಾರರು ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ತಮ್ಮ ಬೀರುವಿನಿಂದ ತೆಗೆದು ಹಾಜರುಪಡಿಸಿರುತಾರೆ. ಅಷ್ಟರಲ್ಲಿ ಸಹಾಯಕ ಆಯುಕ್ತರಾದ ವಿಜಯಕುಮಾರ್ ರವರು ಬಂದಿದ್ದು ಕಡತದ ದಾಖಲೆಗಳನ್ನು, ಹಾಜರಾತಿ ಪುಸ್ತಕದ ಪ್ರತಿ ಹಾಗೂ ಜಾವಕ್ ಪುಸ್ತಕದ ಪ್ರತಿಗಳನ್ನು ಸದರಿಯವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಎಫ್.ಡಿ.ಸಿ. ನಂದಿನಿಯವರಿಗೆ ಸಂಭಾಷಣೆಯನ್ನು ಕೇಳಿಸಿದ್ದು, ಸದರಿ ಸಿ.ಡಿ.ಯಲ್ಲಿದ್ದ ಧ್ವನಿಯು ಎದುರುದಾರರೆಂದು ಗುರುತಿಸಿರುತ್ತಾರೆ. ಟ್ರ್ಯಾಪ್ ಕಾಲಕ್ಕೆ ವಾಯ್ಸ್ ರೆಕಾರ್ಡರ್ ನಲ್ಲಿ ದಾಖಲಿಸಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರು ಹಾಗೂ ದೂರುದಾರರ ಮಾದರಿ ಧ್ವನಿಗಳನ್ನು ತಜ್ಞರ ಅಭಿಪ್ರಾಯಕ್ಕಾಗಿ ಪಡೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ:17/08/2017ರಂದು ಮಧ್ಯಾಹ್ನ 2.20 ರಿಂದ ಸಾಯಂಕಾಲ 7 ಗಂಟೆಯವರೆಗೆ ಸಹಾಯಕ ಆಯುಕ್ತರವರ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv. ತನಿಖಾ ಕಾಲದಲ್ಲಿ ಎದುರುದಾರರ ಕೈಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಶರ್ಟ್ ಜೇಬನ್ನು ತೊಳೆದ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಪ್ರಶ್ನಿತ ಧ್ವನಿಯು ಎದುರುದಾರರ ಮಾದರಿ ಧ್ವನಿಯೊಂದಿಗೆ ಹೋಲಿಕೆ ಆಗುತ್ತದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ.

v. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ.

3. ಎದುರದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ದಿ: 04/08/2021ರಂದು ಜಾರಿ ಮಾಡಿದ್ದು, ಸದರಿಯವರು ಪರಿವೀಕ್ಷಣಾ ಟಿಪ್ಪಣಿಗೆ ಸಲ್ಲಿಸಿದ ಸಮಜಾಯಿಷಿಯು ದಿ: 21/08/2021ರಂದು ಈ ಪ್ರಾಧಿಕಾರಕ್ಕೆ ತಲುಪಿರುತ್ತದೆ. ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ಧಾರವಾಡ ಮುನಿಸಿಪಾಲಿಟಿ ವ್ಯಾಪ್ತಿಗೆ ಬರುವ ಕೆಲಗೇರಿ ಗ್ರಾಮದ ಆಸ್ತಿ ನಂ.139/22 ಪಿಐಡಿ ನಂ.1/775 ಇದಕ್ಕೆ ಸಂಬಂಧಿಸಿದಂತೆ 3 ಗುಂಟೆ ಜಾಗವನ್ನು ಉತಾರ ಮಾಡಿಕೊಡಲು 15,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುವುದು ಹಾಗೂ ಅದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ ಅನ್ನುವುದು ಸುಳ್ಳು ಇರುತ್ತದೆ. ಪರಿವೀಕ್ಷಣಾ ಟಿಪ್ಪಣಿಯಲ್ಲಿ ಹೇಳಿದ ಆಪಾದನೆಗಳು ಅಂದರೆ ತಾನು ದೂರುದಾರರಿಂದ ಸಾಯಿಬಾಬಾ ದೇವಸ್ಥಾನದ ಹತ್ತಿರ ಲಂಚದ ಹಣವನ್ನು ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿರುವುದು ಹಾಗೂ ತನ್ನ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆದಾಗ ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುವುದು ಹಾಗೂ ಶರ್ಟ್ ಜೇಬಿನ ಒಳಭಾಗವನ್ನು ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುವುದು ಹಾಗೂ ತನಿಖಾ ಕಾಲದಲ್ಲಿ ನಡೆಸಿದ ಪ್ರಕ್ರಿಯೆಗಳು ಸುಳ್ಳು ಹಾಗೂ ಬನಾವಟಿಯಿಂದ ಕೂಡಿರುತ್ತವೆ ಎಂದು ನಿವೇದಿಸಿಕೊಂಡಿರುತ್ತಾರೆ. ಪರಿವೀಕ್ಷಣಾ ಟಿಪ್ಪಣೆಯಲ್ಲಿ ಮಾಡಿದ ಆಪಾದನೆಗಳನ್ನು ಅಲ್ಲಗಳೆದು ತಾನು ಭ್ರಷ್ಟಾಚಾರ ಹಾಗೂ ಕರ್ತವ್ಯದಲ್ಲಿ ದುರ್ನಡತೆ ತೋರಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲಾ ನ್ಯಾಯಾಲಯದಲ್ಲಿರುವ ಕ್ರಿಮಿನಲ್ ಪ್ರಕರಣವು ಕೊನೆಯ ಹಂತದಲ್ಲಿರುವುದರಿಂದ, ಸದರಿ ಪ್ರಕರಣವು ಮುಗಿಯುವವರೆಗೆ ಯಾವುದೇ ಕ್ರಮವನ್ನು ಜರುಗಿಸಬಾರದೆಂದು ಹಾಗೂ ತಾನು ಶಿಸ್ತುಕ್ರಮಕ್ಕೆ ಒಳಪಡಲು ಭಾದ್ಯನಿರುವುದಿಲ್ಲ, ಆ ಕಾರಣದಿಂದ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಮತ್ತು ಪೋಲೀಸರು ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಂದು ತಮ್ಮ ಸಮಜಾಯಿಷಿಯಲ್ಲಿ ನಿವೇದಿಸಿಕೊಂಡಿರುತ್ತಾರೆ.

4. ತನಿಖಾಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಿದಾರರ ಪುರಾವೆಗಳನ್ನು ಪರಾಂಭರಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟು, ಲಂಚವನ್ನು ಪಡೆದು ದುರ್ನಡತೆ ತೋರಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಲಾದ ಎಲ್ಲಾ ಆಪಾದನೆಗಳು ಸುಳ್ಳು ಹಾಗೂ ಬನಾವಟಿಯಿಂದ ಕೂಡಿರುತ್ತವೆ ಎಂದು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡಿದ್ದು, ಈ ಹಂತದಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆಗಳನ್ನು ನಂಬದಿರಲು ಹಾಗೂ ಎದುರುದಾರರು ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ನಂಬಲು ಸಾಕಷ್ಟು ಪುರಾವೆ ಇರುವುದಿಲ್ಲ. ಕ್ರಿಮಿನಲ್ ಮೊಕದ್ದಮೆ ಹಾಗೂ ಇಲಾಖಾ ವಿಚಾರಣೆಯನ್ನು ಸಮಾನಾಂತರವಾಗಿ ಏಕಕಾಲದಲ್ಲಿ ನಡೆಸಬಹುದೆಂದು ಸರ್ವೋಚ್ಚ ನ್ಯಾಯಾಲಯವು ಅನೇಕ ತೀರ್ಪುಗಳಲ್ಲಿ ಉಲ್ಲೇಖಿಸಿರುತ್ತದೆ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿದಂತೆ ಕ್ರಿಮಿನಲ್ ಮೊಕದ್ದಮೆ ಮುಗಿಯುವವರೆಗೆ ಇಲಾಖಾ ವಿಚಾರಣೆ ನಡೆಸದಂತೆ ಕ್ರಮ ಜರುಗಿಸದಿರಲು ಕಾನೂನಿನಲ್ಲಿ ರಹಾ ಇರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ನ್ಯಾಯತಾ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

5. ದೂರಿನಲ್ಲಿ ಮಾಡಿದ ಆಪಾದನೆ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ತೋರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966, ನಿಯಮ 3(1) (i) to (iv) ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ, ಎದುರುದಾರರ ವಿರುದ್ಧ ಶಿಸ್ತುಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14 (ಎ) ಅಡಿಯಲ್ಲಿ ಇರುವ ಅಧಿಕಾರವನ್ನು ಚಲಾಯಿಸಿ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ

ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡುಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

30/11/21

(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)
ಗೌರವಾನ್ವಿತ ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.